**Prajavani**

Date: Friday, July 11, 2014 Page No.3A

Edition: Mysore Language: Kannada

ಪ್ರಜಾವಾಣಿ ವಾರ್ತೆ

ಮೈಸೂರು: ದೇಶದ ಅಭಿವೃದ್ಧಿಗಾಗಿ ಸಕಾರಾತ್ಮಕ ಸೂಚನೆಯನ್ನು ಕೇಂದ್ರ ಸರ್ಕಾರದ ಬಜೆಟ್ ನೀಡಿದೆ ಎಂದು ಮೈಸೂರಿನ ಕೈಗಾರಿಕೋದ್ಯಮಿಗಳು, ಶಿಕ್ಷಣ, ವಾಣಿಜ್ಯ ರಂಗಗಳ ಗಣ್ಯರು ಅಭಿಪ್ರಾಯಪಟ್ಟಿದ್ದಾರೆ.

ಚಾಮುಂಡಿಬೆಟ್ಟದ ರಸ್ತೆಯಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವ್ಯವಸ್ಥಾಪನ ಮತ್ತು ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ (ಎಸ್‌ಡಿಎಂಐಡಿ) ಗುರುವಾರ ಏರ್ಪಡಿಸಲಾಗಿದ್ದ ಬಜೆಟ್ ವೀಕ್ಷಣೆ ಮತ್ತು ಚರ್ಚೆಯಲ್ಲಿ ಭಾಗವಹಿಸಿದ್ದ ಬಹುತೇಕರು 'ಬಜೆಟ್ ಆಶಾದಾಯಕ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಭಾರತೀಯ ಕೈಗಾರಿಕೆಗಳ ಒಕ್ಕೂಟದ ಮೈಸೂರು ವಿಭಾಗದ ಅಧ್ಯಕ್ಷ ಆರ್.ಸಿ. ಜಗದೀಶ್, 'ಈ ಬಜೆಟ್‌ನಲ್ಲಿ ಮಧ್ಯಮ, ಸಣ್ಣ, ಸೂಕ್ಷ್ಮ ಉದ್ಯಮಗಳ ಸಾಮರ್ಥ್ಯ ವೃದ್ಧಿಗೆ ತಾಂತ್ರಿಕ ಸಹಾಯ ಮತ್ತು ಬೆಂಬಲ ನೀಡುವಂತಿದೆ. ಬೃಹತ್ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯಿದೆ. ಆರ್ಥಿಕ ಅಭಿವೃದ್ಧಿಗೆ ವೇಗ ನೀಡುವಲ್ಲಿ ಸಕಾರಾತ್ಮಕ ಧೋರಣೆಯು ಈ ಬಜೆಟ್‌ನಲ್ಲಿ ವ್ಯಕ್ತವಾಗಿದೆ. ಆದಾಯ ತೆರಿಗೆ ಕುರಿತ ಕ್ರಮ, ಕೈಗಾರಿಕಾ ಕಾರಿಡಾರ್ ಮತ್ತು ಸ್ಮಾರ್ಟ್ ಸಿಟಿ ಯೋಜನೆಗಳು ಪೂರಕವಾಗಿವೆ. ಒಟ್ಟಿನಲ್ಲಿ ಒಂಬತ್ತು ತಿಂಗಳು ಅವಧಿಯ ಈ ಬಜೆಟ್ ಅಭಿವೃದ್ಧಿ ಮತ್ತು ಹಣದುಬ್ಬರವನ್ನು ಸಮತೋಲನಗೊಳಿಸುವಂತಹ ಬಜೆಟ್ ಆಗಿದೆ' ಎಂದು ಹೇಳಿದರು.

ಎಸ್‌ಡಿಎಂಐಎಂಡಿ ನಿರ್ದೇಶಕ ಎನ್.ಆರ್. ಪರಶುರಾಮನ್ ಮಾತನಾಡಿ, 'ಕೆಲವು ರಾಜ್ಯಗಳಲ್ಲಿ ಐಐಎಂ ಮತ್ತು ಐಐಟಿಗಳನ್ನು ಆರಂಭಿಸುವುದಾಗಿ ಘೋಷಿಸಿದ್ದಾರೆ. ಆದರೆ, ಇತ್ತೀಚೆಗೆ ಆರಂಭವಾಗಿರುವ ಐಐಎಂಗಳು ಇನ್ನೂ ಸ್ಥಿರವಾಗಿ ನಿಲ್ಲಲು ಸಾಧ್ಯವಾಗಿಲ್ಲ. ಅವುಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಹೊಸ ಐಐಎಂಗಳನ್ನು ಸಬಲಗೊಳಿಸಬೇಕು' ಎಂದು ಹೇಳಿದರು.

'ಯುವ ನಾಯಕತ್ವ ಅಭಿವೃದ್ಧಿ ಮತ್ತು ಐಟಿ ಕ್ಷೇತ್ರದ ಅಭಿವೃದ್ಧಿಗೆ 500 ಕೋಟಿ ರೂಪಾಯಿ ಮೀಸಲಿಟ್ಟಿರುವುದು ಸಕಾರಾತ್ಮ ಅಂಶವಾಗಿದೆ' ಎಂದು ಆರ್‌ಐಐಟಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವೆಂಕಟೇಶ್ ಹೇಳಿದರು.

ಕಾರ್ಯಕ್ರಮದಲ್ಲಿ ರಂಗಸನ್ಸ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್ ಹಣಕಾಸು ವಿಭಾಗದ ಉಪಾಧ್ಯಕ್ಷ ಕೆ.ಎನ್. ಫಣೀಶ್, ಆಟೋಮೊಟಿವ್ ಲಿಮಿಟೆಡ್ ಕಂಪೆನಿ ಕಾರ್ಯದರ್ಶಿ ಎಸ್. ರಾಮಕುಮಾರ್ ಹಾಜರಿದ್ದರು.



ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣೆ ಮತ್ತು ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಗುರುವಾರ ನಡೆದ ಕೇಂದ್ರ ಬಜೆಟ್ ವೀಕ್ಷಣೆ ಮತ್ತು ಚರ್ಚೆ ಕಾರ್ಯಕ್ರಮದಲ್ಲಿ ಆರ್‌ಐಐಟಿ ವ್ಯವಸ್ಥಾಪಕ ನಿರ್ದೇಶಕ ವೆಂಕಟೇಶ್, ರಂಗಸನ್ಸ್ ಎಲೆಕ್ಟ್ರಾನಿಕ್ಸ್ ಪ್ರೈವೆಟ್ ಲಿಮಿಟೆಡ್‌ನ ಹಣಕಾಸು ಉಪಾಧ್ಯಕ್ಷ ಕೆ.ಎನ್. ಫಣೀಶ್, ಸಿಐಐ ಮೈಸೂರು ಅಧ್ಯಕ್ಷ ಆರ್.ಸಿ. ಜಗದೀಶ್, ಎಸ್‌ಡಿಎಂಐಎಂಡಿ ನಿರ್ದೇಶಕ ಎನ್.ಆರ್. ಪರಶುರಾಮನ್, ಆಟೋಮೊಟಿವ್ ಲಿಮಿಟೆಡ್ ಕಾರ್ಯದರ್ಶಿ ಎಸ್. ರಾಮಕುಮಾರ್ ಹಾಜರಿದ್ದರು

## ಮೈಸೂರು ನಾಗರಿಕರಿಗೆ ಬೇಸರ

ಮೈಸೂರು: ಕೇಂದ್ರ ಬಜೆಟ್‌ನಲ್ಲಿ ಮೈಸೂರಿಗೆ ಜವಳಿ ಪಾರ್ಕ್ ಹೊರತು ಬೇರೇನೂ ಕೊಡುಗೆ ನೀಡದಿರುವುದರಿಂದ ಇಲ್ಲಿನ ನಾಗರಿಕರಲ್ಲಿ ಬೇಸರ ಮೂಡಿಸಿದೆ. ಜವಳಿ ಪಾರ್ಕ್ ಸ್ಥಾಪನೆಯಾದರೆ ಬಹಳಷ್ಟು ಉದ್ಯೋಗಗಳು ಸೃಷ್ಟಿಯಾಗಲಿದೆ ಎಂಬ ಆಶಾಭಾವ ಯುವಪೀಳಿಗೆಯಲ್ಲಿ ಮೂಡಿದೆ.

ಸಾಂಸ್ಕೃತಿಕ ನಗರಿಯ ವಿಮಾನ ನಿಲ್ದಾಣವನ್ನು ವಿಮಾನ ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಏನೂ ಪ್ರಸ್ತಾಪ ಇಲ್ಲದಿರುವುದು, ಇಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿ ನಿಟ್ಟಿನಲ್ಲಿ ಯಾವುದೇ ಪ್ಯಾಕೇಜ್ ಘೋಷಣೆಯಾಗದಿರುವುದು ಜನರಲ್ಲಿ ಬಹಳಷ್ಟು ಬೇಸರ ಮೂಡಿಸಿದೆ.

ಮೈಸೂರನ್ನು 'ಪಾರಂಪರಿಕ ನಗರ'ವಾಗಿ ಘೋಷಿಸಲಿದ್ದಾರೆ ಮತ್ತು ಇಲ್ಲಿನ ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ನಿಟ್ಟಿನಲ್ಲಿ ಯೋಜನೆಗಳು ಘೋಷಣೆಯಾಗಲಿದೆ ಎಂಬ ನಿರೀಕ್ಷೆಗಳು ಹುಸಿಯಾಗಿವೆ.

ಹೊಗೆಸೊಪ್ಪು ಬೆಳೆಗಾರರ ಹಿತ ಕಾಯುವ ನಿಟ್ಟಿನಲ್ಲಿ ಕ್ರಮ ವಹಿಸದಿರುವುದು, ರಸಗೊಬ್ಬರಕ್ಕೆ ಸಬ್ಸಿಡಿ ಕಡಿಮೆ ಮಾಡಿರುವುದು ಈ ಭಾಗದ ರೈತರಿಗೆ ನಿರಾಸೆ ಉಂಟು ಮಾಡಿದೆ.

ಭಾಷಾ ಸಂಸ್ಥಾನ (ಸಿಐಐಎಲ್), ಮೈಸೂರು ವಿಶ್ವವಿದ್ಯಾಲಯ, ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಸಿಎಫ್‌ಟಿಆರ್‌ಐ), ರಕ್ಷಣಾ ಆಹಾರ ಪ್ರಯೋಗಾಲಯಗಳಲ್ಲಿ (ಡಿಎಫ್‌ಆರ್‌ಎಲ್), ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಗಳತ್ತ ಹಣಕಾಸು ಸಚಿವ ಚಿತ್ತ ಹರಿಸಿಲ್ಲ ಎಂಬುದು ಶಿಕ್ಷಣ ತಜ್ಞರು, ಸಂಶೋಧಕರಲ್ಲಿ ನಿರಾಸೆ ಮೂಡಿಸಿದೆ.

## ಶ್ರೀಧರ್ಮಸ್ಥಳ ಸಂಸ್ಥೆಯಲ್ಲಿ ಚರ್ಚೆ

ನಗರದ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣೆ ಅಭಿವೃದ್ಧಿ ಸಂಸ್ಥೆಯಲ್ಲಿ ಗುರುವಾರ ಆಯೋಜಿಸಿದ್ದ ಬಜೆಟ್ ಮಂಡನೆ ನಂತರದ ಸಂವಾದದಲ್ಲಿ ಆರ್ಥಿಕ ತಜ್ಞರು ಅಭಿಪ್ರಾಯ ಮಂಡಿಸಿದರು.

'ಹೂಡಿಕೆದಾರರಲ್ಲಿನ ಅಪನಂಬಿಕೆ ಮತ್ತು ಗೊಂದಲಗಳನ್ನು ನಿವಾರಿಸಿ ಭಾರತದಲ್ಲಿ ವ್ಯಾಪಾರವನ್ನು ಮತ್ತಷ್ಟು ಸುಲಭ, ಸ್ನೇಹಮಯಿ ಮತ್ತು ಪರಸ್ಪರ ಲಾಭದಾಯಕವಾಗಿಸುವ ನಿಟ್ಟಿನಲ್ಲಿ ಆದ್ಯತೆ ನೀಡಲಾಗಿದೆ. ನಿರ್ದಿಷ್ಟ ಬಾಂಡುಗಳ ಮೇಲೆ ಹೂಡಿಕೆಗೆ ಕೆಲವಾರು ವಿನಾಯಿತಿಗಳನ್ನು ನೀಡಲಾಗಿದೆ' ಎಂದು ಡಿಲಾಯಿಟ್ ಸಂಸ್ಥೆ ವ್ಯವಸ್ಥಾಪಕ ಸುಬ್ರಹ್ಮಣ್ಯನ್ ಕೃಷ್ಣನ್ ಹೇಳಿದರು.

'ರಫ್ತು ಹೆಚ್ಚಿಸಲು ಮತ್ತು ಆಮದು ಇಳಿಕೆಗೆ ಕ್ರಮ ವಹಿಸಲಾಗಿದೆ. ಕರೆಂಟ್ ಅಕೌಂಟ್ ಡೆಫಿಸಿಟ್ (ಸಿಎಡಿ) ನಿರ್ವಹಣಾ ಮಟ್ಟ ತಲುಪುವ ಸಾಧ್ಯತೆ ಇದೆ. ಹೊಸ ಸರ್ಕಾರವು ಹೂಡಿಕೆ ನಿಟ್ಟಿನಲ್ಲಿ ಇದ್ದ ತೊಡಕುಗಳ ನಿವಾರಣೆಗೆ ಕಡಿತಗೊಳಿಸಿದೆ. ಇದರಿಂದಾಗಿ ಬಹುತೇಕ ಪ್ರಮುಖ ಉದ್ದಿಮೆ ವಲಯಗಳಲ್ಲಿ ವಿದೇಶಿ ನೇರ ಬಂಡವಾಳವು ಹೆಚ್ಚಿನ ಪ್ರಮಾಣದಲ್ಲಿ ಹರಿದು ಬರಲಿದೆ ಎಂಬ ನಿರೀಕ್ಷೆ ಇದೆ. ಹಣದುಬ್ಬರ ಇಳಿಕೆಗೆ ಕ್ರಮ ವಹಿಸಲಾಗಿದೆ' ಎಂಬುದು ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ.ಸುದ್ದಾಸತ್ವರಾಯ್ ಅವರ ಅನಿಸಿಕೆ.